**ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 29.06.2019 ರಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಇತರೆ ಹಿರಿಯ ಅಧಿಕಾರಿಗಳೊಡನೆ ನಡೆದ ವಿಡಿಯೋ ಸಂವಾದದ ನಡವಳಿಗಳು.**

ಪ್ರಾರಂಭದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ವಿಡಿಯೋ ಸಂವಾದದ ಪ್ರಗತಿ ಪರಿಶೀಲನಾ ಸಭೆಗೆ ಸ್ವಾಗತವನ್ನು ಕೋರಿ ಈಗಾಗಲೇ ನಿಗದಿಪಡಿಸಿರುವ ವಿಷಯಸೂಚಿಯನ್ವಯ ಇಂಧೀಕರಿಸಿದ ಮಾಹಿತಿಯನ್ನು ಎಲ್ಲರಿಗೂ ತಲುಪಿಸಲಾಗಿದ್ದು, ಅದರಂತೆ ಮುಂದಿನ ವಿಡಿಯೋ ಸಂವಾದದ ಪರಿಶೀಲನಾ ಸಂವಾದ ನಡೆಸಿಕೊಡಲು ಮಾನ್ಯ ಸಚಿವರನ್ನು ಕೋರಿದರು.

ಪ್ರಾರಂಭದಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ಸಂಬಂಧಿಸಿದಂತೆ 2018-19ರ ಸಾಲಿನಲ್ಲಾಗಿರುವ ಆರ್ಥಿಕ ಮತ್ತು ಭೌತಿಕ ಪ್ರಗತಿ, ಎದುರಿಸಲಾದ ಆಡಳಿತಾತ್ಮಕ ಮತ್ತು ತಾಂತ್ರಿಕ ಸಮಸ್ಯೆಗಳು ಮತ್ತು 2019-20ರ ಸಾಲಿನ ಕ್ರಿಯಾಯೋಜನೆ ಕುರಿತಂತೆ ಸುದೀರ್ಘ ಚರ್ಚೆ ನಡೆಸಲಾಯಿತು. ಅದರಂತೆಯೇ ರಸ್ತೆಗಳು, ನರೇಗಾ, ಪಂಚಾಯತ್ ರಾಜ್ ಆಡಳಿತ ಮತ್ತು ಇ-ಆಡಳಿತ ಬಾಬ್ತಿಗೆ ಸಂಬಂಧಿಸಿದಂತೆ ಸಮಾಲೋಚನೆ ಮತ್ತು ಚರ್ಚೆ ನಡೆಸಿ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

- ಈಗಾಗಲೇ ಪ್ರಾರಂಭಿಸಿರುವ < ರೂ.5 ಲಕ್ಷ ಕ್ಕಿಂತ ಕಡಿಮೆಯಿರುವ ಕುಡಿಯುವ ನೀರಿನ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಉಡುಪಿ, ಮಂಗಳೂರು ಹಾಗೂ ರಾಜ್ಯದ ಇತರೆ ಭಾಗಗಳಲ್ಲಿ ಪ್ರಾರಂಭಿಸಿರುವ ತೆರೆದ ಬಾವಿಗಳನ್ನು ಸಹ ಜಾಗ್ರತೆಯಾಗಿ ಪೂರ್ಣಗೊಳಿಸಬೇಕು. ಅವುಗಳ ಬಿಲ್ ಪಾವತಿಯನ್ನು ಸಹ ಈಗಾಗಲೇ ಒದಗಿಸಿರುವ ಅನುದಾನದಲ್ಲಿ ಮಾಡತಕ್ಕದ್ದು.
- 2018-19ರ ಸಾಲಿನಲ್ಲಿ ಅನುಮೋದನೆಯಾಗಿದ್ದರೂ ಇನ್ನೂ ಪ್ರಾರಂಭಿಸದಿರುವ ಅಥವಾ ಇತರೆ ಯೋಜನೆಗಳಡಿ ಅಳವಡಿಸಲು ಅವಕಾಶವಿರುವ ಎಲ್ಲಾ ಯೋಜನೆಗಳನ್ನು ಕೈಬಿಡಬೇಕು. ಒಂದು ವೇಳೆ ಅವುಗಳ ಅವಶ್ಯಕತೆಯಿದ್ದಲ್ಲಿ 2019-20ರ ಸಾಲಿನಲ್ಲಿ ಅನುದಾನ ಲಭ್ಯತೆಗನುಗುಣವಾಗಿ ಚಾಲ್ತಿ ಮಾರ್ಗಸೂಚಿಯನ್ವಯ ಅಳವಡಿಸಲು ಆಯಾಯಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ವಹಿಸಬೇಕು. ಯಾವುದೇ ಕಾರಣಕ್ಕೂ ಮುಂದುವರೆದ ಯೋಜನೆಗಳ ಬಿಲ್ ಪಾವತಿಗೆ ಪ್ರಸಕ್ತ ಸಾಲಿನಲ್ಲಿ ಅವಕಾಶ ನೀಡಬಾರದು.
- OHT ಗಳು ಸೇರಿದಂತೆ > ರೂ.5 ಲಕ್ಷಕ್ಕಿಂತ ಮೇಲ್ಪಟ್ಟ ಮತ್ತು ಮುಂದುವರೆದಿರುವ ಎಲ್ಲಾ ಕುಡಿಯುವ ನೀರಿನ ಕಾಮಗಾರಿಗಳನ್ನು **ಸೆಪ್ಟೆಂಬರ್-2019ರೊಳಗೆ** ಪೂರ್ಣಗೊಳಿಸತಕ್ಕದ್ದು.
- ಈಗಾಗಲೇ ಹಿಂದಿನ ಸಭೆಗಳಲ್ಲಿ ನಿರ್ದೇಶಿಸಿರುವ ರೀತ್ಯಾ ಕುಡಿಯುವ ನೀರಿನ ಇಂಜಿನಿಯರಿಂಗ್ ವಿಭಾಗ ಜಿಲ್ಲಾ/ಗ್ರಾಮ/ತಾಲ್ಲೂಕು ಪಂಚಾಯತಿ ನಿಯಮಾನುಸಾರ Asset Register ಸಮರ್ಪಕವಾಗಿ ನಿರ್ವಹಣೆ ಮಾಡಬೇಕು. ಕುಡಿಯುವ ನೀರಿನ ಬಾಬ್ತಿನ Casing Pipes, GI Pipes, Mark3-Borewells-Handpumps, Motor Pumps, Generators,

Starters, Cables ಮತ್ತಿತ್ತರೆ ಬಳಸಲು ಯೋಗ್ಯವಿರುವ ಸಾಮಗ್ರಿಗಳನ್ನು ಆಯಾಯ ಪಂಚಾಯತಿವಾರು ಗಣನೆಗೆ ತೆಗೆದುಕೊಂಡು ದಾಖಲೆ ಇಂಧೀಕರಿಸಬೇಕು. ಸದರಿ ಸಾಮಗ್ರಿಗಳನ್ನು ಸುರಕ್ಷಿತವಾಗಿರಿಸಬೇಕು. ಇಂಜಿನಿಯರಿಂಗ್ ವಿಭಾಗಗಳು ಟೆಂಡರ್ ಕರೆಯುವ ಮುನ್ನ ಲಭ್ಯವಿರುವ ಸಾಮಗ್ರಿಗಳ ಮರುಬಳಕೆಯನ್ನು ಮಿತವ್ಯಯ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಗಮನಿಸಿ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಬೇಕು.

- ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರ ಜಿಲ್ಲೆಗಳಲ್ಲಿ ಈಗಾಗಲೇ ಇಂತಹ ವಿಧಾನವನ್ನು ಅಳವಡಿಸಿಕೊಂಡು ಲಭ್ಯವಿರುವ ಸಾಮಗ್ರಿಗಳ ಮರುಬಳಕೆ ಮಾಡುವ ಮುಖೇನ ಕುಡಿಯುವ ನೀರಿನ ಬಾಬ್ತಿನಲ್ಲಿ ಮೇಲ್ಕಂಡ ಪರಿಕ್ರಮದಿಂದ ಜಿಲ್ಲಾಧಿಕಾರಿಗಳ SDRF / NDRF ಅನುದಾನ ಜೊತೆಗೆ ಟಾಸ್ಕ್ ಫೋರ್ಸ್ ಅನುದಾನ ಮತ್ತು ಸಾಮಗ್ರಿ ಮರು ಬಳಕೆ ಮಾಡುವ ಮುಖೇನ ಅಗತ್ಯವಿರುವ ಹೆಚ್ಚುವರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುತ್ತಾರೆ. ಕುಡಿಯುವ ನೀರಿನ ಬಾಬ್ತಿನಲ್ಲಿ ಪ್ರತಿ ವರ್ಷ ರೂ.2.00 ರಿಂದ ರೂ.4 ಕೋಟಿ ವರೆಗೆ ಉಳಿತಾಯ ಮಾಡುವುದಲ್ಲದೆ, ರೂ.11.5 ಕೋಟಿಯಿಂದ ರೂ.20 ಕೋಟಿ ವರೆಗಿನ ದಾಸ್ತನನ್ನು ಸಂಗ್ರಹಣೆ ಮಾಡಿರುತ್ತಾರೆ. ಈ ವಿಧಿವಿಧಾನಗಳನ್ನು ಇತರ ಜಿಲ್ಲಾ ಪಂಚಾಯತಿಗಳೂ ಸಹ ಅನುಸರಿಸತಕ್ಕದ್ದು.
- ಎಲ್ಲಾ ಕುಡಿಯುವ ನೀರಿನ ಯೋಜನೆಗಳ ವಹಿವಾಟನ್ನು IMIS ನಲ್ಲಿ ಕಡ್ಡಾಯವಾಗಿ ದಾಖಲಿಸಬೇಕು. ಒಂದು ವೇಳೆ NRDWP Norms ಪ್ರಕಾರ ಟಾಸ್ಕ್ ಫೋರ್ಸ್ ನಡಿ ತುರ್ತು ನಿಮಿತ್ತ ವಾಸ್ತವವಾಗಿ ಅನುಷ್ಠಾನಗೊಳಿಸಿದ ಕುಡಿಯುವ ನೀರಿನ ಕಾಮಗಾರಿಗಳ ವಿವರಗಳನ್ನು IMIS ನಲ್ಲಿ ದಾಖಲಿಸಲು ಸಮಸ್ಯೆಯಾಗಿದ್ದಲ್ಲಿ, ಒಂದು ಬಾರಿ ವಿನಾಯತಿಯೆಂದು ಗಾಂಧಿ ಸಾಕ್ಷಿ ಕಾಯಕದಡಿ ವಿವರಗಳನ್ನು ನಮೂದಿಸಿ, ಬಿಲ್ ಪಾವತಿಸಲು ಅನುಮೋದಿಸಬಹುದು.
- SDP/SCP-TSP ಯಡಿ ಲಭ್ಯವಾಗಿರುವ ಸಂಪೂರ್ಣ ಅನುದಾನ ವಿನಿಯೋಗ ಕ್ಲಿಷ್ಟವಾದಲ್ಲಿ, ತುರ್ತು ಕುಡಿಯುವ ನೀರಿನ ಕಾಮಗಾರಿಗಳ ವಿದ್ಯುದ್ದೀಕರಣ ವೆಚ್ಚವನ್ನು (ಮೂಲ ಅಂದಾಜಿನ Over & above ವೆಚ್ಚವನ್ನು ಮಾತ್ರ) SDP/SCP-TSP ಅನುದಾನದ ವತಿಯಿಂದ ಭರಿಸುವ ಮೂಲಕ Escom ಗಳಲ್ಲಿರುವ ಬಾಕಿ ಬಿಲ್ ಸಂದಾಯ ಮಾಡಲು ನಿಯಮಾನುಸಾರ ಕ್ರಮ ವಹಿಸಬೇಕು.
- Metering ವ್ಯವಸ್ಥೆಯಿಲ್ಲದಿರುವ ಯಾವುದೇ ಕುಡಿಯುವ ನೀರಿನ ಅಥವಾ ದಾರಿ ದೀಪದ ವಿದ್ಯುತ್ ಸ್ಥಾವರಗಳ ಬಿಲ್ ಪಾವತಿ ಮಾಡತಕ್ಕದ್ದಲ್ಲ.
- ನಿರುಪಯುಕ್ತ ಕುಡಿಯುವ ನೀರಿನ ಯೋಜನೆಗಳ ವಿದ್ಯುತ್ ಸಂಪರ್ಕವನ್ನು ಮುಕ್ತಾಯಗೊಳಿಸಿ, ನೂತನ ಜಲಮೂಲ ಆಧಾರಿತ ಕುಡಿಯುವ ನೀರಿನ ಯೋಜನೆಯ ವಿದ್ಯುದ್ದೀಕರಣಕ್ಕೆ, ಮುಕ್ತಾಯಗೊಳಿಸಿದ ಯೋಜನೆಯ ವಿದ್ಯುತ್ ಸ್ಥಾವರ/ ಸಂಪರ್ಕವನ್ನು ವರ್ಗಾಯಿಸಿ ಪುನರ್ ಬಳಕೆ ಮಾಡಿಕೊಳ್ಳುವ ವ್ಯವಸ್ಥೆಯಾಗಬೇಕು.
- ಈಗಾಗಲೇ ವಿವಿಧ ಯೋಜನೆ/ಕಾರ್ಯಕ್ರಮಗಳಡಿ ಪೂರ್ಣಗೊಳಿಸಿರುವ ಬಹುಗ್ರಾಮ (MVS) ಯೋಜನೆಗಳು ನಿರುಪಯುಕ್ತವಾಗಿದ್ದಲ್ಲಿ CEO ಗಳು ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿ ಅವುಗಳನ್ನು ಚಾಲನೆಯಲ್ಲಿಡಲು ತಾಂತ್ರಿಕ ಮತ್ತು ಆರ್ಥಿಕ ಕಾರ್ಯಸಿಂಧುತ್ವವಿರುವ ಯೋಜನೆಗಳ ಪುನಶ್ಚೇತನಕ್ಕಾಗಿ ಜಾಗ್ರತೆಯಾಗಿ ಪ್ರಸ್ತಾಪಿಸಬೇಕು. ಈ ಕುರಿತಂತೆ **ಜುಲೈ-2019ರೊಳಗೆ** ಒಮ್ಮೆ CEO ಗಳು ಖುದ್ದಾಗಿ

ಪುನಶ್ಚೇತನಗೊಳಿಸಬೇಕಾಗಿರುವ MVS ಯೋಜನೆಗಳು ಮತ್ತು ಅನುಷ್ಠಾನದಲ್ಲಿರುವ MVS ಯೋಜನೆಗಳಿಗೆ ಭೇಟಿ ನೀಡಿ **ಜುಲೈ-2019ರೊಳಗೆ** ಯೋಜನಾವಾರು ವರದಿ ನೀಡಬೇಕು.

- ಪ್ರಸಕ್ತ ಸಾಲಿನಲ್ಲಿ ಜಿಲ್ಲಾವಾರು ನಿಗದಿಪಡಿಸಿರುವ 53 MVS ಯೋಜನೆಗಳನ್ನು ಪೂರ್ಣಗೊಳಿಸಿ ಕಾರ್ಯಗತಗೊಳಿಸಬೇಕು.
- ಮಂಡ್ಯ, ಮೈಸೂರು, ತುಮಕೂರು, ಚಿಕ್ಕಮಗಳೂರು, ಹಾಸನ, ರಾಯಚೂರು ಮತ್ತು ದಾವಣಗೆರೆ ಜಿಲ್ಲಾ ಪಂಚಾಯತ್ CEO ಗಳು MVS ಯೋಜನೆಗಳ ಪ್ರಗತಿ ತೀವ್ರಗೊಳಿಸಲು ಆದ್ಯತೆ ನೀಡಬೇಕು.
- ಹೆಚ್ಚಿನ ಕಾಲವಕಾಶ ತೆಗೆದುಕೊಳ್ಳುವ ಮತ್ತು ಆರ್ಥಿಕ ಹೆಚ್ಚುವರಿ ವೆಚ್ಚಕ್ಕೆ ಅವಕಾಶವಾಗುವ Inpounding Reserviors ನಿರ್ಮಾಣ ಬದಲು, ನೇರವಾಗಿ ನದಿ/ಜಲಾಶಯಗಳಿಂದ ಕುಡಿಯುವ ನೀರಿಗೆ ಸೀಮಿತಗೊಳಿಸಿದಂತೆ ಅಗತ್ಯವಿರುವ ವಿನ್ಯಾಸದ (Diameter) pipeline ಅಳವಡಿಸಿಕೊಳ್ಳುವ ವಿಧಾನ ಅಳವಡಿಸಿಕೊಳ್ಳಬೇಕು. ಈ ಕುರಿತು ಪರಿಶೀಲಿಸಿ ಪ್ರಸ್ತಾಪಿಸಬೇಕು.
- ಸಂಭವನೀಯ ಅನುದಾನದ ಜಿಲ್ಲಾವಾರು ಹಂಚಿಕೆಯನ್ನು ಗ್ರಾನೀಸ ಬಾಬ್ತಿನಡಿ ಮಾರ್ಚ್-2019ರಲ್ಲಿಯೇ ಎಲ್ಲಾ ZP ಗಳಿಗೂ ತಿಳಿಸಲಾಗಿದೆ. ಆದುದರಿಂದ CEO ಗಳು ವಿದ್ಯುದ್ದೀಕರಣ ಸೇರಿದಂತೆ DWSC ಸಭೆಗಳನ್ನು ನಡೆಸಿ ತಕ್ಷಣ ಕ್ರಿಯಾಯೋಜನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಬೇಕು. **ಜುಲೈ-2019 ಅಂತ್ಯದೊಳಗೆ SLSSC ಸಭೆ** ನಡೆಸಿ ಕ್ರಿಯಾಯೋಜನೆಗೆ ಸರ್ಕಾರದ ಅನುಮೋದನೆ ನೀಡಬೇಕು.
- ಎಲ್ಲಾ RWS ಕಾಮಗಾರಿಗಳು ಟೆಂಡರ್ ಮುಖೇನವೇ ಆಗಬೇಕು. ತುಂಡುಗುತ್ತಿಗೆಗೆ ಅವಕಾಶವಿರುವುದಿಲ್ಲ. ಕಾಮಗಾರಿಗಳ ಅನುಷ್ಠಾನದ ಆದೇಶವನ್ನು **ಸೆಪ್ಟೆಂಬರ್-2019 ರೊಳಗೆ** ನೀಡಬೇಕು.
- ಪ್ರಸಕ್ತ ಸಾಲಿನಲ್ಲಿ ಎಲ್ಲಾ ಅನುದಾನದ ವಹಿವಾಟು Treasury (SHT) ಮುಖೇನಾ ಆಗುವುದರಿಂದ March-2020ರ ಅಂತ್ಯದೊಳಗೆ ಬಿಲ್ ಪಾವತಿಗಳು ಆಗಬೇಕು ಹಾಗೂ ಸಂಪೂರ್ಣ ಅನುದಾನ ಬಳಕೆಯಾಗಬೇಕು. ಇಲ್ಲದಿದ್ದಲ್ಲಿ ಲಭ್ಯವಿರುವ ಅನುದಾನ ವ್ಯಪಗತವಾಗಲಿದೆ ಮತ್ತು OB ಪದ್ಧತಿಗೆ ಅವಕಾಶವಿರುವುದಿಲ್ಲ, ಈ ಕುರಿತು ಎಲ್ಲಾ ಅನುಷ್ಠಾನಾಧಿಕಾರಿಗಳು ಎಚ್ಚರಿಕೆ ವಹಿಸಬೇಕು.
- MVS ಯೋಜನೆಗಳ O&M Tender ಪ್ರಕ್ರಿಯೆಯನ್ನು ಜಿಲ್ಲಾವಾರು ಅಥವಾ ತಾಲ್ಲೂಕುವಾರು ಮಾಡಬಹುದು. ನೀರು ಶುದ್ಧೀಕರಣ (WPP) ಘಟಕಗಳ ನಿರ್ವಹಣೆಗಾಗಿ ಜಿಲ್ಲಾವಾರು/ತಾಲ್ಲೂಕುವಾರು ಟೆಂಡರ್ ಪ್ರಕಟಣೆಯಾಗಿ ಸ್ವೀಕೃತಿಯಾಗಿರುವ ಬಿಡ್ ಗಳನ್ನು ಆಧರಿಸಿ ಸ್ಥಳೀಯವಾಗಿ ಪ್ಯಾಕೇಜ್ ಗಳನ್ನು 100 or 50 WPP ಎಂದು ವರ್ಗೀಕರಣ ಮಾಡಿಕೊಳ್ಳಬಹುದು.
- Smart Card ಸಹಿತ WPP O & M ವ್ಯವಸ್ಥೆ ಮಾಡಿದ್ದಲ್ಲಿ ಪ್ರತಿ ಘಟಕಕ್ಕೆ ರೂ.15,000/- ಮತ್ತು ಪ್ರತಿ ಲೀಟರ್ ಗೆ Rs. 5/-PL ಎಂದು ನಿಗದಿಪಡಿಸಬಹುದು.
- ಇತರೆ WPP ಗಳಿಗೆ One time Repair & Maintenance ಎಂದು WPPಗೆ ಇತರೆ ನಿರ್ವಹಣೆಗಾಗಿ Rs.3000/- per unit ನಿಗದಿಪಡಿಸಬಹುದು.

- ಪ್ರತಿ ಜಿಲ್ಲೆಯಲ್ಲಿ ತಾಲ್ಲೂಕುವಾರು ಕೊಳವೆ ಬಾವಿ ಕೊರೆಯುವ ಸಂಬಂಧ ಸೂಕ್ತ ನಿಬಂಧನೆಗಳೊಳಗೆ ಟೆಂಡರ್ ಕರೆದು 18 ತಿಂಗಳು ಅಥವಾ 2 ವರ್ಷಗಳ ಅವಧಿಯವರೆಗೆ ಚಾಲನೆಯಲ್ಲಿರುವಂತೆ ಗುತ್ತಿಗೆದಾರರು ಮತ್ತು ದರವನ್ನು ನಿಗದಿಪಡಿಸುವುದು.
- ಕನಿಷ್ಠ ಪ್ರತಿ ತಾಲ್ಲೂಕಿನಲ್ಲಿ ಮತ್ತು ಜಿಲ್ಲೆಯಲ್ಲಿ 1ಕ್ಕಿಂತ ಹೆಚ್ಚು ಸಂಸ್ಥೆಗಳನ್ನು Borewell ಕೊರೆಸುವ ಸಂಬಂಧ ಅನುಮೋದಿಸಿ ಪಟ್ಟಿ ಸಿದ್ಧಪಡಿಸಿಕೊಳ್ಳುವುದು.
- ಅನುಮೋದಿಸುವಾಗ ಒಟ್ಟಾರೆ ದರವನ್ನು ಗಣನೆಗೆ ತೆಗೆದುಕೊಳ್ಳಬೇಕು. ಪ್ರಾರಂಭದಲ್ಲಿ Borewell ಕೊರೆಯುವುದು ಮತ್ತು ಅಗತ್ಯ ಲಭ್ಯತೆಯ ನೀರು ಆಳದವರೆಗಿನ ಪ್ರಕ್ರಿಯೆಯನ್ನು ಗಮನದಲ್ಲಿಟ್ಟುಕೊಂಡು ದರ ತುಲನೆ ಮಾಡಿ ಸರಾಸರಿ ದರ ನಿಗದಿಪಡಿಸಬೇಕು.
- ಪ್ರಸ್ತುತ ವಿದ್ಯಮಾನಗಳನ್ನು ಗಮನಿಸಿ ಆರ್ಥಿಕ ಅಧಿಕಾರ ವಿಕೇಂದ್ರೀಕರಣ ಮಾಡಲಾಗಿದ್ದು ರೂ.1.00 ಕೋಟಿರವರೆಗೆ ಕಾರ್ಯಪಾಲಕ ಇಂಜಿನಿಯರ್ ಗಳು ಟೆಂಡರ್ ಕರೆಯಲು ಅನುಮೋದನೆ ನೀಡುವುದು ಮತ್ತು ರೂ.2.00 ಕೋಟಿರವರೆಗಿನ ಟೆಂಡರ್ ಗಳನ್ನು ಅನುಮೋದಿಸಿ ಟೆಂಡರ್ ಕರೆಯುವ ಅಧಿಕಾರವನ್ನು ZP CEOಗಳಿಗೆ ನೀಡಲಾಗಿದೆ.
- SR ದರದ ಮೇಲೆ 5% ಟೆಂಡರ್ Premium ಒಳಗಿದ್ದಲ್ಲಿ (<5%) CEO ಗಳೇ ಅನುಮೋದಿಸಲು ಸಹ ಅಧಿಕಾರ ನೀಡಲಾಗಿದೆ.
- ವಿಭಾಗೀಯ ಅಧೀಕ್ಷಕ ಅಭಿಯಂತರ್ ಗಳು ಗ್ರಾನೀಸ ರವರಿಗೆ ರೂ.5.00 ಕೋಟಿ ಅಂದಾಜು ಮೊತ್ತದವರೆಗೆ ಗ್ರಾನೀಸ ಯೋಜನೆಗಳ ತಾಂತ್ರಿಕ ಅಧಿಕಾರ ನೀಡಲಾಗಿದೆ.
- Single Bid<SR ಮತ್ತು SR ದರಕ್ಕೆ ಸಮನಾಗಿ ಸ್ವೀಕೃತಿಯಾಗಿರುವ ಸಂದರ್ಭಗಳಲ್ಲಿ ನಿಯಮಾನುಸಾರ ಕಾರ್ಯಾದೇಶ ನೀಡಲು ಅನುಮತಿಸಬಹುದು.
- Feb-2019 ಸ್ವಚ್ಛ ಭಾರತ್ ಮಿಷನ್ ಕಾರ್ಯಕ್ರಮದಡಿ LOB ಗಳನ್ನು ಆಧರಿಸಿ ಬಿಲ್ ಪಾವತಿ ಮಾಡಲು ಅಂತಿಮ ಗಡುವಾಗಿತ್ತು. ಆದರೆ ಇನ್ನೂ ಬಾಕಿ ಉಳಿದಿರುವುದು ಗಂಭೀರ ವಿಷಯವಾಗಿದೆ. ಪ್ರಗತಿ ತೀವ್ರಗೊಳಿಸಿ 100% ಸಾಧನೆ **ಆಗಸ್ಟ್-15 ರೊಳಗಾಗಬೇಕು.**
- ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿ ಗುರಿ ಸಾಧನೆಗಾಗಿ (IEC) ಮಾಹಿತಿ ಸಂವಹನ ಪ್ರಚಾರ ಬಿತ್ತಿ ಪತ್ರಗಳಲ್ಲಿ ಏಕಸಾಮ್ಯತೆಯಿರಬೇಕು.
- ವ್ಯಾಟ್ಸಪ್ ಗ್ರೂಪ್ ಮಾಡಿಕೊಂಡು HRD/IEC ಚಟುವಟಿಕೆಗಳಿಗೆ ಸಂಬಂಧಿಸಿದಂತೆ Video, Jingle ಮತ್ತಿತ್ತರ ಸಂದೇಶಗಳನ್ನು broad-cast listನಲ್ಲಿ ಸಂವಹನ ಮಾಡಬೇಕು. PDO ಗಳು ಒಂದು ವ್ಯಾಟ್ಸಪ್ ಗ್ರೂಪ್ ಮಾಡಿಕೊಂಡು ನರೇಗಾ, SBM, IEC, Co-ordinator ಗಳೊಂದಿಗೆ VC ನಡೆಸಿಕೊಳ್ಳುವ ವ್ಯವಸ್ಥೆ ನಡೆಸಬೇಕು. Waste Segregation ಕುರಿತಂತೆ Tips ಪ್ರಸಾರಗೊಳಿಸಲು Co-ordinator ರೊಂದಿಗೆ ಕ್ರಮವಹಿಸಬೇಕು.
- ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರನ್ನು ಈ ಸಲುವಾಗಿ ಬಳಸಿಕೊಳ್ಳಬೇಕು ಮತ್ತು ಪ್ಲಾಸ್ಟಿಕ್ ಬದಲು ಪರ್ಯಾಯವಾಗಿ ಏನು ಉಪಯೋಗಿಸಬೇಕೆಂದು ಸಾದರ ಪಡಿಸಬೇಕು.
- ಪ್ರಸ್ತುತ ನೇಮಕವಾಗಿರುವ SBM Co-ordinator, HRD/IEC ಚಟುವಟಿಕೆಗಳಲ್ಲಿ ಕಾಣಸಿಗುತ್ತಿಲ್ಲ ಮತ್ತು ತಳಮಟ್ಟದಲ್ಲಿ ಸ್ಥಳಿಯವಾಗಿ ತುಂಬಾ ಕೆಲಸವಾಗಬೇಕಾಗಿದೆ. Year-Ending, Compiling ಮತ್ತು ಅಂದಾಜು ವೆಚ್ಚಗಳನ್ನು ತಯಾರಿಸುವ ಪ್ರಕ್ರಿಯೆ ಚುರುಕುಗೊಳ್ಳಬೇಕು.

- GP ಮಟ್ಟದಲ್ಲಿ ಇತರ ಸಂಪನ್ಮೂಲಗಳನ್ನು ಒದಗಿಸಿಕೊಂಡು ನಿಗದಿತ ಗುರಿ ಮತ್ತು Empaneled NGOಗಳಿಗೆ ಕಾಲಮಿತಿ ಸಾಧನೆಗಾಗಿ ಗ್ರಾಮ ಪಂಚಾಯತಿಗಳಿಗೆ ಜವಾಬ್ದಾರಿ ವಹಿಸಬೇಕು.
- ಎಲ್ಲಾ ಜಿಲ್ಲಾ ಪಂಚಾಯತಿಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯ ಯೋಜನೆಗಳ ಸಂಬಂಧ ಒಬ್ಬ ನೋಡಲ್ ಅಧಿಕಾರಿ ಗೊತ್ತುಪಡಿಸಬೇಕು.
- ನಿರುಪಯುಕ್ತ ಕುಡಿಯುವ ನೀರಿನ ಯೋಜನೆಗಳ (Borewell, MWS/ನಳನೀರು ಸರಬರಾಜು) ಯೋಜನೆಗಳ ವಿದ್ಯುತ್ ಸಂಪರ್ಕ: ತಕ್ಷಣ ಪತ್ತೆ ಹಚ್ಚಿ ಸಂಬಂಧಿಸಿದ Escomಗಳಿಗೆ ವರದಿ ಮಾಡಿ, ಅನಾವಶ್ಯಕವಾಗಿ ವಿಧಿಸುವ ವಿದ್ಯುತ್ ಶುಲ್ಕವನ್ನು ತಪ್ಪಿಸಬೇಕು. ಒಂದು ವೇಳೆ ಸದರಿ ಯೋಜನೆಗಳ ಪುನ:ಶ್ಚೇತನ ಕಾರ್ಯಸಿಂಧುವಲ್ಲವೆಂದು ಖಾತ್ರಿಯಾದಲ್ಲಿ ಸದರಿ ಸಂಪರ್ಕ ವ್ಯವಸ್ಥೆಯನ್ನು ಹೊಸದಾಗಿ ಸಂಪರ್ಕ ಬೇಕಾಗಿರುವ ಕಡೆಗೆ ವರ್ಗಾಯಿಸಿ ಕೊಡಲು ವ್ಯವಸ್ಥೆ ಮಾಡಿಕೊಡಬೇಕು. ಇದರಿಂದ ಅನಾವಶ್ಯಕವಾಗಿ ವಿದ್ಯುತ್ ಸಂಪರ್ಕದ (deposit) ಠೇವಣಿ ಮಾಡುವುದು ಮತ್ತು ಪ್ರತಿ ಮಾಹೆ ಬಳಕೆಯಾಗದಿದ್ದರೂ ವಿದ್ಯುತ್ ಧ್ವೀಕರಣ ಶುಲ್ಕ ಪಾವತಿಸುವುದನ್ನು ತಪ್ಪಿಸಬಹುದು.

**(ಕ್ರಮ: ಆಯುಕ್ತರು, ಕಗ್ರಾನೀ ನೈರ್ಮಲ್ಯ ಇಲಾಖೆ, CE, RDWSD, SBM / ಎಲ್ಲಾ ಜಿಲ್ಲಾ ಪಂಚಾಯಿತಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)**

- ಗ್ರಾಮ ಪಂಚಾಯತಿಗಳಿಗೆ ಒಟ್ಟಾರೆ ಲಭ್ಯವಾಗುವ ಹಣಕಾಸು ಆಯೋಗದ ಅನುದಾನ, untied Grants ಹಾಗೂ ಮತ್ತಿತ್ತರೆ ಸಂಪನ್ಮೂಲಗಳ ಶಿಸ್ತುಬದ್ಧ ವಿನಿಯೋಗಕ್ಕಾಗಿ ವಿಧಿವಿಧಾನಗಳನ್ನು ರೂಪಿಸಿ ಬದ್ಧತೆಗೊಳಪಡಿಸಬೇಕು. ಈ ಸಲುವಾಗಿ ಕಾರ್ಯಸಿಂಧುತ್ವವಿರುವ ರೂಪುರೇಷುಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಜಾಗ್ರತೆಯಾಗಿ ಪರಿಚಯಿಸಬೇಕು.

**(ಕ್ರಮ: ನಿರ್ದೇಶಕರು, PR- I &II )**

- 2215-ಲೆಕ್ಕ ಶೀರ್ಷಿಕೆಯಡಿ ಜಿಲ್ಲಾ ಪಂಚಾಯತಿ ಬೇಡಿಕೆಗೆ ಹಾಗೂ ಬಾಕಿ ಬಿಲ್ ಪಾವತಿಗಳಿಗೆ ರೂ.119.00 ಕೋಟಿಗಳನ್ನು ಒದಗಿಸಲು ಆರ್ಥಿಕ ಇಲಾಖೆಗೆ ಜಾಗ್ರತೆಯಾಗಿ ಪ್ರಸ್ತಾಪಿಸಬೇಕು.

**(ಕ್ರಮ: ಆಯುಕ್ತರು, ಕಗ್ರಾನೀ ನೈರ್ಮಲ್ಯ ಇಲಾಖೆ/ ನಿರ್ದೇಶಕರು, PR II )**

- ಸ್ಥಳೀಯ ಶಾಸಕರು ಜಿಲ್ಲಾ ಉಸ್ತುವಾರಿ ಸಚಿವರ ಸಮಾಲೋಚನೆಯೊಂದಿಗೆ ಮುಖ್ಯಮಂತ್ರಿಗಳ ಗ್ರಾಮೀಣ ಸುಮಾರ್ಗ ಯೋಜನೆಯಡಿ 5 ವರ್ಷಗಳ ನಿರ್ವಹಣೆ ಸಂಬಂಧ DPR ಸಿದ್ಧಪಡಿಸಿಕೊಳ್ಳಬೇಕು. Oct-2019ರೊಳಗೆ ಕಾಮಗಾರಿ ಪ್ರಾರಂಭಿಸಿ ಕಾರ್ಯಾದೇಶ ನೀಡಿ, ರಸ್ತೆ ಕಾಮಗಾರಿ ಪ್ರಾರಂಭವಾಗಬೇಕು. ಇದಕ್ಕಾಗಿ ತಾಲ್ಲೂಕುವಾರು ಪ್ಯಾಕೇಜ್ ಸಿದ್ಧಪಡಿಸಿ ಟೆಂಡರ್ ಕರೆಯಬೇಕು.
- 3054-ಲೆಕ್ಕ ಶೀರ್ಷಿಕೆಯಡಿ ಲಭ್ಯವಿರುವ ರೂ.170 ಕೋಟಿಗಳನ್ನು ರಸ್ತೆಗಳಿಗಾಗಿ ಸ್ಥಳೀಯ ಶಾಸಕರ ನಿಧಿ Convergence ಮತ್ತು ನರೇಗಾದಡಿ Convergence ಮಾಡಿ ಗರಿಷ್ಠ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಿಯಾಯೋಜನೆ ಸಿದ್ಧಪಡಿಸಬೇಕು.
- ನಬಾರ್ಡ್ ನಡಿ ಮೊದಲನೇ ಕಂತು ಬಿಡುಗಡೆಯಾಗಿದೆ. CEO ಗಳು ತಕ್ಷಣ ಕಾರ್ಯಪಾಲಕ ಇಂಜಿನಿಯರ್ ಗಳಿಗೆ ಅನುದಾನ ಬಿಡುಗಡೆ ಮಾಡಿ ಲಭ್ಯವಾದ ಅನುದಾನ lapse ಆಗದಂತೆ ನೋಡಿಕೊಳ್ಳಬೇಕು.

**(ಕ್ರಮ: ನಿರ್ದೇಶಕರು, ಸುವರ್ಣ ಗ್ರಾಮೋದಯ/COO KRRDA)**

- ನರೇಗಾದಡಿ <70% ಸಾಧನೆ ಆಗಿರುವ TP/GP ಗಳನ್ನು ಹಿಂಬಾಲಿಸಿ ಪ್ರಗತಿ ತೀವ್ರಗೊಳಿಸಬೇಕು.
- ಮುಂಗಾರು ಮಳೆಗಾಲದ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ರೇಷ್ಮೆ ಹಾಗೂ ತೋಟಗಾರಿಕೆ ಮತ್ತು ನರ್ಸರಿ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ವಿವೇಚನೆಯಿಂದ ಮಾಡಬೇಕು.
- 'ಜಲಾಮೃತ' ಯೋಜನೆಯಡಿ ಜಿಲ್ಲಾವಾರು ಕ್ರಿಯಾಯೋಜನೆಯನ್ನು ಈಗಾಗಲೇ ನೀಡಿರುವ ಮಾರ್ಗಸೂಚಿಯನ್ವಯ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಬೇಕು.
- ಮಲೆನಾಡು ಪ್ರದೇಶಗಳಲ್ಲಿ Vented Dam ನಿರ್ಮಾಣಕ್ಕಾಗಿ ಗಮನ ಹರಿಸಬೇಕು.
- KSCST-Indian Institute of Science ವರದಿಯನ್ವಯ 14,000 ನೀರು ಸಂಗ್ರಹಣ ಕೆರೆ, ಕುಂಟೆ / ಕಲ್ಯಾಣಿಗಳು ನೈಸರ್ಗಿಕ ಸಾಂಪ್ರದಾಯಿಕ ಜಲ ಮೂಲಗಳ ಪುನಃಶ್ಚೇತನ ಸಲುವಾಗಿ ವೇಳಾಪಟ್ಟಿ ಹಾಕಿಕೊಂಡು ಕಾಲಮಿತಿಯೊಳಗೆ ಪರಿಣಾಮಕಾರಿ ಸಾಧನೆಯಾಗುವಂತೆ ನೋಡಿಕೊಳ್ಳಬೇಕು.
- ತಾಲ್ಲೂಕಿನಲ್ಲಿ 1000-5000 ಹೆಕ್ಟೇರ್ ಗಳಿಗೆ ಅನುಕೂಲವಾಗುವಂತೆ Watershed Ridge to Valley ಕಾಮಗಾರಿಗಳನ್ನು ನರೇಗಾ / ಜಲಾಮೃತ ಯೋಜನೆಯಡಿ Convergence ಮಾಡಿ ಅಂದಾಜು ಪಟ್ಟಿ ಸಿದ್ಧಪಡಿಸಬೇಕು.
- ಕೆರೆಗಳ ಬಳಕೆಗಾಗಿ ಗ್ರಾಮ ಸಮುದಾಯ ಗುಂಪುಗಳನ್ನು ಗುರುತಿಸಿ, ಗ್ರಾಮಗಳಲ್ಲಿ IEC ಚಟುವಟಿಕೆಗಳನ್ನು ಅರಿವು ಮೂಡಿಸಲು ಪ್ರಾರಂಭಿಸಬೇಕು.
- ತಾಂತ್ರಿಕವಾಗಿ ಕಾರ್ಯಸಿಂಧುತ್ವವಿರುವ ಆಳತೆ ಮತ್ತು ಆಳಕ್ಕೆ sub-surface (dead-storage) ಧಕ್ಕೆಯಾಗದಂತೆ ಜಲಮೂಲಗಳ ಮತ್ತು ಕೆರೆಗಳ ಪುನರುಜ್ಜೀವನ ಕಾಮಗಾರಿಯಾಗಬೇಕು.
- ಗ್ರಾಮ ಪಂಚಾಯತಿವಾರು Tree-Plantation ಮಾಡುವ ಕುರಿತು ಅವುಗಳ ಸಂರಕ್ಷಣೆ ಮತ್ತು ಪೋಷಣೆ ಕುರಿತಂತೆ ಕ್ರಿಯಾಯೋಜನೆಯ ವಿವರಗಳನ್ನು ಸರ್ಕಾರಕ್ಕೆ ಕಳುಹಿಸಬೇಕು.
- 'ಜಲಾಮೃತ' ಸಮಿತಿ ಸಭೆಗಳನ್ನು ಸಮರ್ಪಕವಾಗಿ (ಕಾಲಕಾಲಿಕವಾಗಿ) ನಡೆಸಬೇಕು.
- ಕೊಡಗು, ಶಿವಮೊಗ್ಗ, ಚಿಕ್ಕ ಮಗಳೂರು, ಉಡುಪಿ, ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪೂರ್ವಸಿದ್ಧತೆ ಇಲ್ಲದೆ ಹಾಗೂ ಸರಿಯಾದ ನೀರು ಸಂಗ್ರಹಣೆ ವ್ಯವಸ್ಥೆಗಳಿಲ್ಲದೆ ಪ್ರತಿ ವರ್ಷ 2000 ಟಿಎಂಸಿಗೂ ಹೆಚ್ಚಿನ ನೀರು ಸಮುದ್ರಕ್ಕೆ ಹರಿದುಹೋಗುವುದನ್ನು ತಪ್ಪಿಸಿ, Long-term ಶಾಶ್ವತ ಪರಿಹಾರ ಒದಗಿಸುವ ಸಂಬಂಧ ತಾಂತ್ರಿಕವಾಗಿ ಕಾರ್ಯಸಿಂಧುತ್ವವಿರುವ ಯೋಜನೆಗಳನ್ನು ರೂಪಿಸಲು 'ಜಲಾಮೃತ' ಯೋಜನೆಯನ್ನು ಕ್ರಮಬದ್ಧವಾಗಿ ಬಳಸಿಕೊಳ್ಳಬೇಕು. ಇವುಗಳ ಮಾದರಿ, ಅನುಷ್ಠಾನ, ಯಶಸ್ಸು ಕುರಿತಂತೆ ಪಾರದರ್ಶಕವಾಗಿ ಮಾಹಿತಿ ಪ್ರತಿಬಿಂಬಿಸಬೇಕು. ಇದರ ಉಸ್ತುವಾರಿಯನ್ನು ಜಿಲ್ಲಾ ಪಂಚಾಯತಿ CEOಗಳು ಪರಿಣಾಮಕಾರಿಯಾಗಿ ನೋಡಿಕೊಳ್ಳಬೇಕು.

**(ಕ್ರಮ: ಆಯುಕ್ತರು-ಕಗ್ರಾನೀ ನೈರ್ಮಲ್ಯ ಇಲಾಖೆ, CE, RDWSD/ ಆಯುಕ್ತರು-ನರೇಗಾ/ನಿರ್ದೇಶಕರು-ಜಲಾಮೃತ)**

- e-office ಈಗಾಗಲೇ ನೀಡಿರುವ ಏಕರೂಪ ಟೆಂಡರ್ ಮಾದರಿ ಆಧರಿಸಿ Procurement, Installation and Commissioning ಆಗಬೇಕು. ತೆರಿಗೆ ಪರಿಷ್ಕರಣೆ Digitisation, of GP Assets ಹಾಗೂ Left over Property ಕ್ರೋಢೀಕರಣ ಸಮರ್ಪಕ ಆಗಬೇಕು.

**(ಕ್ರಮ: ನಿರ್ದೇಶಕರು -ಇ-ಆಡಳಿತ / ನಿರ್ದೇಶಕರು-PR-I)**

- ಗ್ರಾಮ ಪಂಚಾಯತಿ ಮಟ್ಟದಲ್ಲಿ ತೆರಿಗೆ ವ್ಯಾಪ್ತಿಯಿಂದ ಹೊರಗೆ ಉಳಿದಿರುವ ಎಲ್ಲಾ ನಿವೇಶನ ಮತ್ತು ಮನೆಗಳನ್ನು Demand ಪುಸ್ತಕದಲ್ಲಿ ದಾಖಲಿಸಿ ನಂತರ ಈ-ಸ್ವತ್ತು ದಾಖಲೆಗೆ upload ಮಾಡಬೇಕು. ಜೊತೆಗೆ, ಈಗಾಗಲೇ ಭೂಪರಿವರ್ತನೆ ಆಗಿರುವ ಸರ್ವೆ ನಂಬರ್ ಗಳಿಗೆ ಸಂಬಂಧಿಸಿದಂತೆ ಹಿಂದಿನ ಸಭೆಗಳಲ್ಲಿ ತಿಳಿಸಿರುವಂತೆ, ಜಾಗ್ರತೆಯಾಗಿ ತೆರಿಗೆ ವ್ಯಾಪ್ತಿಗೆ ಸದರಿ ಸ್ವತ್ತನ್ನು ಒಳಪಡಿಸಬೇಕು. ಕಾರಣ ಅ ಸ್ವತ್ತಿನ ತೆರಿಗೆ ಕಂದಾಯ ಇಲಾಖೆಗೂ ಸಂದಾಯವಾಗುವುದಿಲ್ಲ. ಇದರಿಂದ ಗ್ರಾಮ ಪಂಚಾಯಿತಿ ಆದಾಯ ಹೆಚ್ಚಿಸಿಕೊಳ್ಳಬಹುದು.

**(ಕ್ರಮ: ನಿರ್ದೇಶಕರು-PR-I)**

- DSS entry ಗಳನ್ನು ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯವಲಯದ ಅನುದಾನಗಳಿಗೆ ಸಂಬಂಧಿಸಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳೇ ಅನುಷ್ಠಾನಾಧಿಕಾರಿಗಳಾಗಿ Online ನಲ್ಲಿ ವೆಚ್ಚಗಳನ್ನು ದಾಖಲಿಸಬೇಕು. ಈ ವೆಚ್ಚ ಖಜಾನೆಯಲ್ಲಿ ಹಣ ಸೆಳೆದಿರುವ ವೆಚ್ಚದೊಂದಿಗೆ ತಾಳೆಯಾಗತಕ್ಕದ್ದು. ಮುಂದಿನ ಪರಿವೀಕ್ಷಣಾ ಸಭೆಯಲ್ಲಿ ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಬರುವ ಇಲಾಖೆಗಳ ಅನುದಾನ ವಿನಿಯೋಗಕ್ಕೆ ಸಂಬಂಧಿಸಿದಂತೆ DSS entry ಖಜಾನೆ ವೆಚ್ಚಕ್ಕೆ ಸರಿಸಮನಾಗಿ ತಾಳೆಯಾಗದಿದ್ದಲ್ಲಿ, ಸಂಬಂಧಿಸಿದ CAO/CPO/EOಗಳನ್ನು ಹೊಣೆಗಾರರನ್ನಾಗಿಸಬೇಕು. ಇಲ್ಲವಾದ್ದಲ್ಲಿ ಸಂಬಂಧಿಸಿದ ZP CEO ಗಳ ಮೇಲೆ ನೇರವಾಗಿ ಕ್ರಮ ಜರುಗಿಸಲಾಗುವುದು.

**(ಕ್ರಮ: ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)**

- ಇನ್ನು ಮುಂದೆ Finance Commission Grants ಸಂಬಂಧದ ಎಲ್ಲಾ ವಹಿವಾಟುಗಳು Priasoft ಮುಖೇನಾವಾಗಬೇಕು. ಚೆಕ್ ಮುಖೇನ ಮಾಡುವ ಪಾವತಿಯನ್ನು ರದ್ದುಗೊಳಿಸಿದೆ. ಆದುದರಿಂದ ಯಾವುದೇ PDO/EO ಗಳು ಹಣಕಾಸು ಆಯೋಗದ ಅನುದಾನವನ್ನು ಚೆಕ್ ಮುಖೇನ **<u>ಪಾವತಿಸಿದಲ್ಲಿ</u>** ಅಂತಹವರ ವಿರುದ್ಧ CEOಗಳು ಶಿಸ್ತು ಕ್ರಮ ಜರುಗಿಸಬೇಕು.

**(ಕ್ರಮ: ನಿರ್ದೇಶಕರು -ಇ-ಆಡಳಿತ,/ ನಿರ್ದೇಶಕರು-PR-II)**

- ನ್ಯಾಯಲಯ ಮತ್ತು ಲೋಕಾಯುಕ್ತ ಪ್ರಕರಣಗಳಿಗೆ ಸಂಬಂಧಿಸಿದಂತೆ ಇಲಾಖಾ ವರದಿಯನ್ನು ನಿಯಮಾನುಸಾರ ಸಲ್ಲಿಸಿ ಪ್ರಕರಣಗಳನ್ನು ಜಾಗ್ರತೆಯಾಗಿ ಸರಳ ವಿಧಾನದಲ್ಲಿ ಮುಕ್ತಾಯಗೊಳಿಸಲು ನಿಯಮಾನುಸಾರ ಕ್ರಮವಹಿಸಬೇಕು. ಅಮಾನತ್ತು ಪ್ರಕರಣಗಳಿಗೆ ಸಂಬಂಧಿಸಿದಂತೆ ಜಾಗ್ರತೆಯಾಗಿ ವಿಚಾರಣೆ ನಡೆಸಿ ಪ್ರಕರಣಗಳನ್ನು KCS-12ರಡಿ ನಿಯಮಾನುಸಾರ ಮುಕ್ತಾಯಗೊಳಿಸಬೇಕು. ವಿಚಾರಣೆ ನಡೆಸದೆ ದೀರ್ಘಕಾಲ ಅಮಾನತ್ತಿನಲ್ಲಿರಿಸಿ ವೇತನ ಭತ್ಯೆ ಪಾವತಿಸುವ ಬದಲು, ಕೆಲಸಕ್ಕೆ ಪುನರ್ ನೇಮಿಸಿ ಜವಾಬ್ದಾರಿ ನೀಡಿ, ಸರ್ಕಾರಿ ಕೆಲಸ ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳಬೇಕು.
- ತೀವ್ರ ಗಂಭೀರ ಸ್ವರೂಪದ ಹಣಕಾಸು ದುರುಪಯೋಗದಂತಹ ಹಾಗೂ ಕ್ರಿಮಿನಲ್ ಮಾದರಿಯ ಪ್ರಕರಣಗಳನ್ನು ಹೊರತುಪಡಿಸಿ ಉಳಿದ ಪ್ರಕರಣಗಳಲ್ಲಿ ವಿಳಂಬ ಮಾಡದೇ

ಅಮಾನತು ತೆರವುಗೊಳಿಸಿ ಕೆಲಸಕ್ಕೆ ನೇಮಿಸಲು ZP CEOಗಳು ಪ್ರಕರಣಗಳನ್ನು ಪುನರ್ ವಿಮರ್ಶೆ ಮಾಡತಕ್ಕದ್ದು.

**(ಕ್ರಮ: ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಉಪಕಾರ್ಯದರ್ಶಿಗಳು ಆಡಳಿತ I & II)**

ಮೇಲ್ಕಂಡ ಎಲ್ಲಾ ಅಂಶಗಳ ಮೇಲೆ ಅಗತ್ಯ ಕ್ರಮ ಕೈಗೊಂಡು, ಅನುಪಾಲನಾ ವರದಿಯನ್ನು ನಡವಳಿ ತಲುಪಿದ ಒಂದು ವಾರದೊಳಗೆ ಪಿ.ಎಂ.ಐ. ಶಾಖೆಗೆ ನೀಡಲು ಸೂಚಿಸಿ, ವಂದನೆಗಳೊಂದಿಗೆ ಸಭೆ ಮುಕ್ತಾಯವಾಯಿತು.

**ಸರ್ಕಾರದ ಪ್ರಧಾನ ಕಾರ್ಯದರ್ಶಿ,**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

ಸಂಖ್ಯೆ: ಗ್ರಾಅಪ/12/ಯೋಉಮಾ/2019 ದಿನಾಂಕ: 31/07/2019

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಆಯುಕ್ತರು, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ.
3. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ, ಕಾವೇರಿಭವನ ಬೆಂಗಳೂರು-560009.
4. ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಮ್. ಖನಿಜಭವನ ಬೆಂಗಳೂರು.
5. ಉಪಕಾರ್ಯದರ್ಶಿಗಳು, ಆಡಳಿತ- I & II.
6. ನಿರ್ದೇಶಕರು ಪಂಚಾಯತ್ ರಾಜ್ -1/ ಪಂಚಾಯತ್ ರಾಜ್ -2 / ಸ್ವ.ಉ.ಕಾ / ಗ್ರಾಮ ವಿಕಾಸ /PMI /ಇ-ಆಡಳಿತ/ ಆಂತರಿಕ ಆರ್ಥಿಕ ಸಲಹೆಗಾರರು / ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
7. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು & ನೈರ್ಮಲ್ಯ ಇಲಾಖೆ.
8. ಮುಖ್ಯ ಇಂಜಿನಿಯರ್, ಪಂ. ರಾಜ್ ಇಂ.ಇಲಾಖೆ. ಬೆಂಗಳೂರು.
9. ಮುಖ್ಯ ಕಾರ್ಯಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ, ಬೆಂಗಳೂರು.
11. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ.
12. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು.
13. ವಿಶೇಷಾಧಿಕಾರಿ (ಜಿ.ಪಂ), ಆರ್ಥಿಕ ಇಲಾಖೆ, ಕೊಠಡಿ ಸಂಖ್ಯೆ 249 (ಬಿ), ವಿಧಾನಸೌಧ.
14. ನಿರ್ದೇಶಕರು,ಜಿಲ್ಲಾ ಯೋಜನಾ ವಿಭಾಗ, ಯೋಜನಾ ಇಲಾಖೆ, ಬೆಂಗಳೂರು.
15. ನಿರ್ದೇಶಕರು, ಜಲಾಮೃತ.
16. ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಜಿ.ಐ.ಆರ್.ಇ.ಡಿ.
17. ನಿರ್ದೇಶಕರು, ಇ-ಆಡಳಿತ, ಸಭಾ ನಡವಳಿಯನ್ನು ವೆಬ್ ಸೈಟ್ ನಲ್ಲಿ ಅಪ್ಲೋಡ್ ಮಾಡಲು ಕೋರಿದೆ.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಸಂಸದೀಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್/ಪಂಚಾಯತ್ ರಾಜ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.